ದಿನಾಂಕ : 12.11.2019 ಓಎಸ್ ನಂ.393/2009 ರಲ್ಲಿ
ಪಿಡಬ್ಲ್ಯೂ-1(ಪುಟ್ಟರೇವಮ್ಮ)

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಪ್ರತಿವಾದಿ ಪರ ವಕೀಲರಿಂದ

ಬಿ ವಿ ಮಂಜುನಾಥರವರಿಗೆ ಮೋಸ ವಂಚನೆಯಿಂದ ದಿಂದ ಮಾರಾಟ ಮಾಡಿರುತ್ತಾರೆ ಎಂದು ಹೇಳಿದ್ದು ಆ ಬಗ್ಗೆ ನಾನು ಇಲ್ಲಿಯವರೆಗೆ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಹೌದು. ಬಿ ವಿ ಮಂಜುನಾಥರವರ ಹೆಸರಿಗೆ ಖಾತೆ ಮತ್ತು ಪಹಣಿ ಬರುತ್ತಿದೆ ಎಂದರೆಹೌದು. ಅವರ ಹೆಸರಿಗೆ ಆಗಿರುವ ಖಾತೆ ಮತ್ತು ಪಹಣಿಯನ್ನು ಪ್ರಶ್ನಿಸಿ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ ಎಂದರೆ ಹೌದು. ದಾವಾ ಸ್ವತ್ತುಗಳ ಬಗ್ಗೆ ಹಕ್ಕು ನಿವೃತ್ತಿ ಪತ್ರವನ್ನು ಬಲವಂತವಾಗಿ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ನಾನು ಉಪನೋಂದಾಣಾಧಿಕಾರಿಗಳಿಗೆ ಹೇಳಿರುವುದಿಲ್ಲ ಎಂದರೆ ಹೌದು ಹೇಳಿರುವುದಿಲ್ಲ.

ನಾನು ಸ್ವಇಚ್ಛೆಯಿಂದ ರಾಮನಗರದ ಉಪನೋಂದಾಣಾಧಿಕಾರಿಗಳ ಕಛೇರಿಗೆ ಹೋಗಿ 10 ಲಕ್ಷ ನಗದು ಹಣ ಪಡೆದುಕೊಂಡು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುತ್ತೇವೆ ಎಂದರು ನಾವು ಹಣ ಪಡೆದುಕೊಂಡಿಲ್ಲ. ಹಕ್ಕು ನಿವೃತ್ತಿ ಆಧಾರದ ಮೇಲೆ ನಮ್ಮ ತಂದೆಯ ಪಿತ್ರಾರ್ಜಿತ ಸ್ವತ್ತುಗಳನ್ನು ಪ್ರತಿವಾದಿಗಳಿಗೆ ಬಿಟ್ಟುಕೊಟ್ಟಿರುತ್ತೇವೆ ಎಂದರೆ ನಮಗೆ ಗೊತ್ತಿಲ್ಲದೆ ಬಿಟ್ಟುಕೊಟ್ಟಿರುತ್ತೇವೆ, ಗೊತ್ತಿದ್ದರೆ ಬಿಟ್ಟುಕೊಡುತ್ತಿರಲಿಲ್ಲ ಎನ್ನುತ್ತಾರೆ. ನಾನು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುವ ಕಾರಣ ದಾವಾ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ವಾದಿಯರು ಈಗಾಗಲೇ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುವ ಕಾರಣ

ದಾವಾ ಸ್ವತ್ತಿನಲ್ಲಿ ಯಾವುದೇ ಭಾಗದ ಹಕ್ಕು ಉಳಿದುಕೊಂಡಿಲ್ಲ ಎಂದರೆ ನಮ್ಮ ತಾತನ ಸ್ವತ್ತಿನಲ್ಲಿ ನಮಗೆ ಭಾಗ ಬರಬೇಕು ಎನ್ನುತ್ತಾರೆ. ನಾನು 10 ಲಕ್ಷ ಹಣ ಪಡೆದುಕೊಂಡು ಹಕ್ಕು ನಿವೃತ್ತಿಪತ್ರ ಬರೆದುಕೊಟ್ಟಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬೆಲೆ ಇತ್ತಿಚೇಗೆ ಹೆಚ್ಚಾಗಿರುವ ಕಾರಣ ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.